<u>Witness appeared through V.C and Duly sworn on 20-06-2025.</u>

**<u>Cross-examination by:</u>** Sri. A.B.H. Advocate for Accused No.1.

1) ಆರ್ಟಿಕಲ್ ನಂಬ್ರ-1 ರ ಮೊಬೈಲ್ ಫೋನ್ ಅನ್ನು ನಾನು ತಪಾಸು ಮಾಡಿಲ್ಲ. ಆರ್ಟಿಕಲ್ ನಂಬ್ರ-1 ರಲ್ಲಿ ಹೇಳಿದಂತಹ ಸಂಭಾಷಣೆಯನ್ನು ಮೊಬೈಲ್ ನಿಂದ ಎಂಓ-1 ರ ಡಿ.ವಿ.ಡಿಗೆ ಹೇಗೆ ವರ್ಗಾಯಿಸಲ್ಪಟ್ಟಿತ್ತು ಎಂದು ಗೊತ್ತಿಲ್ಲ. ಸಂಭಾಷಣೆಯನ್ನು ವರ್ಗಾಯಿಸುವ ಸಮಯದಲ್ಲಿ, ಸಂಭಾಷಣೆಯ ಪೈಲ್ ಸೈಜ್‌ನ್ನು ಹೆಚ್ಚು-ಕಡಿಮೆ ಮಾಡಿದಾಗ ಅದರ ಸ್ಪಷ್ಟತೆಗೆ ಬಾಧ್ಯತೆ ಬರುತ್ತದೆ ಎಂದರೆ ಸರಿಯಲ್ಲ. ಸಂಭಾಷಣೆಗಳನ್ನು ತಾಳೆ ಮಾಡಲು ಮೂಲ, ಮೊಬೈಲ್, ರೆಕಾರ್ಡ್ಡ ಸೂಕ್ತ, ಅದನ್ನು ಸಿಡಿಗೆ ಹಾಕಿದಾಗ ಅದು ತಾಳೆಗೆ ಅಷ್ಟು ಸೂಕ್ತವಲ್ಲ ಎಂದರೆ, ಆ ರೀತಿಯಾಗಿ ಡಿಜಿಟಲ್ ಸಾಕ್ಷ್ಯಗಳು ಬರುವುದಿಲ್ಲ. ಮೊಬೈಲ್ ನ ಸಂಭಾಷಣೆಯನ್ನು ಸಿ.ಡಿ.ಗೆ ಹಾಕುವಾಗ ಆಗುವ ಟ್ಯಾಂಪರ್ ಗಳು ನಮಗೆ ತಿಳಿಯುವುದಿಲ್ಲ ಎಂದರೆ ಸರಿಯಲ್ಲ.

2) ಸೌಂಡ್ ನ ಪಿಚ್ ಗಳನ್ನು (ಡೆಸಿಬಲ್ಸ) ಗಳಲ್ಲಿ ನೋಡುತ್ತೇವೆ ಎಂದರೆ ನಿಜ. ಅದನ್ನು ಮಿಲಿ ಸೆಕೆಂಡ್ಸಗಳಲ್ಲಿ ನೋಡುತ್ತೇವೆ. ಸ್ವತ್ತು ನಂಬ್ರ-13 ರಲ್ಲಿಯ ಸಂಭಾಷಣೆಯ ಒಟ್ಟು ಅವಧಿಯನ್ನು ನಮೂದಿಸಿಲ್ಲ ಎಂದರೆ ನಿಜ. ಸ್ವತ್ತು ನಂಬ್ರ-13 ರಲ್ಲಿಯ ಎಲ್ಲಾ ಧ್ವನಿಗಳ ಮಾದರಿಗಳನ್ನು ನನಗೆ ಕಳುಹಿಸಿಲ್ಲ. ಇಬ್ಬರದ್ದು ಮಾತ್ರವೇ ಕಳುಹಿಸಿದ್ದರು. ಆ ಮಾದರಿಗಳನ್ನು ಕಳುಹಿಸಿದಾಗ ಆರೋಪಿತರ ಹೆಸರುಗಳನ್ನು ಸಹ ಅದರಲ್ಲಿ ಹೇಳಿದ್ದರು. ಮಾದರಿಗಳನ್ನು ನಾನು ತಪಾಸು ಮಾಡುವ ಮೊದಲು, ಆ ಕೇಸಿನ ಹಿನ್ನಲೆಯನ್ನು ಸಹ ನನಗೆ ಕಳುಹಿಸಿದ್ದರು ಎಂದರೆ ನಿಜ. ನನಗೆ ಕಳುಹಿಸಿದ್ದ ನಾಲ್ಕು ಸಿಡಿಗಳನ್ನು ನಾನು ಒಮ್ಮೆಲೇ ತಪಾಸು ಮಾಡಿಲ್ಲ, ಆದರೆ ಒಂದಾದ ನಂತರ ಇನ್ನೊಂದನ್ನು ತಪಾಸು ಮಾಡಿದ್ದೇನೆ. ಸದರಿ ತಪಾಸಣೆಯನ್ನು ಒಂದೇ ದಿನದಲ್ಲಿ ಮಾಡಿಲ್ಲ ಎಂದರೆ ನಿಜ.

3) ಸ್ವತ್ತು ನಂಬ್ರ-13 ರಲ್ಲಿಯ ಮಾದರಿಗಳನ್ನು ತಪಾಸು ಮಾಡುವಾಗ ಎಷ್ಟು vowels ಗಳನ್ನು ಮಾದರಿಗಾಗಿ ತೆಗೆದುಕೊಂಡಿತ್ತು ಎಂದರೆ, ಮಾದರಿಯಾಗಿ 20 vowels ಗಳನ್ನು ತೆಗೆದುಕೊಂಡಿದ್ದೆ, ಅವುಗಳಲ್ಲಿ 5 ನ್ನು ಮಾತ್ರವೇ ವರದಿಯಲ್ಲಿ ಹೇಳಿದ್ದೇನೆ. ನನ್ನ ತಪಾಸಣೆಯಲ್ಲಿ ಎಷ್ಟು vowels ಗಳನ್ನು ಯಾವ ಸಿಡಿಯಿಂದ ತೆಗೆದಿದೆ ಎಂದು ವರದಿಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಆಯ್ದುಕೊಂಡದ್ದು ಅಲ್ಲದೆ, ತಪಾಸು ಮಾಡಿದ ಬಗೆಗೂ ಮತ್ತು ತಪಾಸು ಮಾಡಿದಾಗ ಕಂಡು ಬಂದ ಅಂಶಗಳ ಬಗೆಗೂ ಕೂಡ ದಾಖಲಿಸಿದ್ದೇನೆ.

4) 1 ನೇ ಅರೋಪಿಯ ಎಷ್ಟು ಮಾದರಿಗಳನ್ನು ಕಳುಹಿಸಿದ್ದರು ಎಂದರೆ, 6 ಮಾದರಿಗಳನ್ನು ಕಳುಹಿಸಿದ್ದರು. ನಮ್ಮ ತನಿಖಾ ಮಾರ್ಗಸೂಚಿ ಪ್ರಕಾರ ಕನಿಷ್ಟ 10 ಮಾದರಿಗಳನ್ನು ಪಡೆದು, ತಪಾಸು ಮಾಡಿದರೇ ಮಾತ್ರವೇ, ಸರಿಯಾದ ಫಲಿತಾಂಶ ಕಂಡುಬರುತ್ತದೆ ಎಂದರೆ ಸರಿಯಲ್ಲ. ನನ್ನ ವರದಿಯಲ್ಲಿ ಪ್ರಶ್ನಿತ ಮತ್ತು ಮಾದರಿ ಸಂಭಾಷಣೆಗಳಲ್ಲಿ ಕಂಡು ಬರುವ ಸ್ವಾಮ್ಯತೆಯ ಶೇಕಡಾವಾರು ಅಂಶವನ್ನು ದಾಖಲಿಸಿಲ್ಲ ಎಂದರೆ, ಆ ರೀತಿ ದಾಖಲಿಸಲು ವಿಧಾನದಲ್ಲಿ ಅವಕಾಶ ಇಲ್ಲ. ಸಂಭಾಷಣೆಗಳಲ್ಲಿಯ ಧ್ವನಿಗಳನ್ನು ಕಂಡುಕೊಳ್ಳಲು ಅನೇಕ ವಿಧಾನಗಳು ಇವೆ ಎಂದರೆ ನಿಜ. ಆ ಎಲ್ಲಾ ವಿಧಾನಗಳನ್ನು ನಾನು ಪಾಲಿಸಿಲ್ಲ ಎಂದರೆ, feature extraction method ನ್ನು ಅಳವಡಿಸಿಕೊಂಡಿದ್ದೇನೆ. ಧ್ವನಿಗಳ ತಪಾಸಣೆಗಾಗಿ Layered Voice Analysis ಎನ್ನುವುದು ಆಧುನಿಕ ವಿಶ್ಲೇಷಣೆಯ ತಂತ್ರಜ್ಞಾನವಾಗಿದೆ ಎಂದರೆ, ಆ ವಿಶ್ಲೇಷಣಾ ಪದ್ಧತಿಯನ್ನು ನಮ್ಮ ಪ್ರಯೋಗಾಲಯದಲ್ಲಿ ಅಳವಡಿಸಿಕೊಂಡಿರುವುದಿಲ್ಲ.

5) ಮಾದರಿಗಳ ಚೈನ್ ಆಪ್ ಕಸ್ಟಡಿಯ ಬಗ್ಗೆ ನನ್ನ ವರದಿಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ತಪಾಸಣೆಗೆ ಪಡೆದಿದ್ದ ಮಾದರಿಗಳನ್ನು ನಾನೇ ಸ್ವತಃ ಪಡೆದಿಲ್ಲ ಎಂದರೆ, ಅದನ್ನು ನಮ್ಮ ಕಚೇರಿಯ ಸಿಬ್ಬಂದಿಗಳು ಪಡೆದು, ತಪಾಸಣೆಗಾಗಿ ನನ್ನ ಬಳಿ ತಂದಿದ್ದರು.

ಮಾದರಿಗಳ ತಪಾಸಣೆಯ ಸಮಯದಲ್ಲಿ ನೋಟ್ಸಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ನಿಜ. ಅಂತ ನೋಟ್ಸಗಳನ್ನು ನನ್ನ ವರದಿಯೊಂದಿಗೆ ಕಳುಹಿಸಿಲ್ಲ ಎಂದರೆ ನಿಜ. ಮಾದರಿಗಳನ್ನು ಕೊಡುವ ಸಮಯದಲ್ಲಿ ಆ ವ್ಯಕ್ತಿ ಒತ್ತಡ ಅಥವಾ ಅನಾರೋಗ್ಯವಾಗಿದ್ದಲ್ಲಿ, ಆ ಧ್ವನಿಯ ಮಾದರಿಗಳ ಸ್ವರಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ನಿಜ. ಒಬ್ಬ ವ್ಯಕ್ತಿ ಒಂದೇ ಮಾತನ್ನು ಅನೇಕ ಸ್ತರಗಳಲ್ಲಿ ಹೇಳಲು ಬರುತ್ತದೆ ಎಂದರೆ, ಅದಕ್ಕೆ ಪಿಚ್ ಒಂದೇ ರೀತಿ ಇರುತ್ತದೆ. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ವಾಯ್ಸ modulation , ಅನುಕರಣೆ ಮಾಡುವ ಸಂಭವ ಇರುತ್ತದೆ ಎಂದರೆ ನಿಜ. ಅದು ನಮ್ಮ ತಪಾಸಣೆಯ ಸಮಯದಲ್ಲಿ ಕಂಡುಬಂದಿಲ್ಲ.

6) ನನಗೆ ತುಳು ಭಾಷೆ ಬರುವುದಿಲ್ಲ. ನನಗೆ ತನಿಖಾಧಿಕಾರಿಯು ಕೇಸಿನ ವಿವರ ಮತ್ತು ಸಂಭಾಷಣೆಯ ವಿವರವನ್ನು ಒದಗಿಸಿದ್ದರ ಆಧಾರದ ಮೇಲೆ, ನಿಪಿ-35 ವರದಿಯನ್ನು ಅವರ ತನಿಖೆಗೆ ಅನುಕೂಲವಾಗುವಂತೆ ಸೃಷ್ಟಿಸಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಪಾಟಿಸವಾಲುಃ **2** ನೇ ಆರೋಪಿಯ ಪರವಾಗಿ ಶ್ರೀ ಎಸ್.ಎ. ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

-ಮರುವಿಚಾರಣೆ - ಇಲ್ಲ -

**ಮರುವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್. ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ